ಜುಲೈ - 1

ಬೆಳಕಿನವರಂತೆ ನಡೆದುಕೊಳ್ಳಿರಿ . . . . . . . .ಕರ್ತನಿಗೆ ಮೆಚ್ಚಿಗೆಯಾದದ್ದು ಏನೆಂಬುದನ್ನು ಪರಿಶೋಧಿಸಿ ತಿಳಿದುಕೊಳ್ಳಿರಿ. -ಎಫೆಸ 5:8,10

ನಾವು ಸತ್ಯದಿಂದ ದೇವರಿಗಾಗಿ ಶುದ್ದೀಕರಿಸಿಕೊಂಡವರಾಗಿದ್ದರೆ, ನಮ್ಮ ಚಿತ್ತ ಸತ್ತುಹೋಗಿ ದೇವರ ಚಿತ್ತವನ್ನು ಅಂದರೆ ಆತನ ಯೋಚನೆ, ಮಾತು ಮತ್ತು ಕೃತಿಗಳನ್ನು ಸಂಪೂರ್ಣವಾಗಿ ನಮ್ಮದಾಗಿಸಿಕೊಂಡಿದ್ದ ಪಕ್ಷದಲ್ಲಿ, ಒಂದು ವೇಳೆ ನಮಗೆ ಅವಕಾಶಗಳು ದೊರೆಯದಿದ್ದರೂ, ನಾವು ಸುವಾರ್ತೆ ಸಾರದಿದ್ದರೂ, ಬಡವರಿಗೆ ದಾನ ಮಾಡದಿದ್ದರೂ, ಸತ್ಯಕ್ಕಾಗಿ ರಕ್ತ ಸಾಕ್ಷಿಗಳಾಗದಿದ್ದರೂ, ನಾವು ಜಯಶಾಲಿಗಳಾಗಿರುವೆವು ಎಂಬ ಬಿರುದನ್ನು ಪಡೆಯುವೆವು. ಈ ಅಂಶವನ್ನು ನಾವೆಲ್ಲರೂ ಚೆನ್ನಾಗಿ ಗಮನಿಸೋಣ ಅದೇನಂದರೆ “ದೇವರ ಚಿತ್ತವೇನಂದರೆ ನೀವು ಶುದ್ಧರಾಗಿ ಇರಬೇಕೆಂಬುದು” -ಈ ಸತ್ಯವನ್ನು ಇತರೆ ಸತ್ಯಗಳು ಅಥವಾ ತಪ್ಪು ಬೋಧನೆಗಳು ಮರೆಮಾಡಬಾರದು. ಈ ಸತ್ಯ ನಮ್ಮ ಜೀವನದ ಪಥವನ್ನು ಆಕ್ರಮಿಸಿಕೊಳ್ಳಲಿ ದೇವರ ಚಿತ್ತ ನಮಗಾಗಿ ನಮ್ಮದಾಗಿದ್ದರೆ ನಮ್ಮ ಮುಂದಿರುವ ದಾರಿಯು ಸ್ಪಷ್ಟವಾಗಿ ಗೋಚರಿಸುವುದು. ಈ ಅಂಶ ಬಹಳ ಮುಖ್ಯವಾದದ್ದು-Z ’99, 4 (ಖ 2411).

* * *

ಜುಲೈ - 2

ಬೈಸಿಕೊಂಡು ಹರಸುತ್ತೇವೆ, ಹಿಂಸೆಪಟ್ಟು ಸಹಿಸಿಕೊಳ್ಳುತ್ತೇವೆ. -1ಕೊರಿಂಥ 4:12

ನೀನು ಒಬ್ಬ ನಂಬಿಗಸ್ತ ವಿದ್ಯಾರ್ಥಿ(ಕ್ರಿಸ್ತನ ಪಾಠಶಾಲೆಯಲ್ಲಿ)ಯಾಗಿದ್ದರೆ, ನೀನು ಬಹುಬೇಗ ಕ್ರಿಸ್ತನ ನಿಯಮ ಅಂದರೆ ಪರಿಪೂರ್ಣ ಸ್ವಾತಂತ್ರ್ಯವನ್ನು ಅರಿತು, ನಿನ್ನ ಯೋಚನೆ, ನಿನ್ನ ಹೃದಯದ ಉದ್ದೇಶವು ಪಾಪಿಯನ್ನು ಹಗೆ ಮಾಡದೆ ಎಲ್ಲಾ ತರವಾದ ಪಾಪವನ್ನು ಹಗೆ ಮಾಡುವವನಾಗುವಾಗಿ ನಿನ್ನ ಹೃದಯದಲ್ಲಿ ದೇವರ ಪ್ರೀತಿಯು ಸಿದ್ದಿಗೆ ಬರುವದು. ನಮ್ಮನ್ನು ನಿಂದಿಸುವವರ ಮತ್ತು ಕೇಡುಮಾಡುವವರ ಬಗ್ಗೆ ನಮ್ಮ ಭಾವನೆಯು ಕಹಿಯಾಗಿ ಕಂಡುಬಂದರೂ ಅದರ ವಿರುದ್ದ ಹೋರಾಡಿ ಅದರ ಮೇಲೆ ಜಯ ಸಾಧಿಸಿ ನಮ್ಮ ಎಲ್ಲಾ ನರನಾಡಿಗಳಲ್ಲಿ ನಮ್ಮ ಆತ್ಮದಲ್ಲಿ ನಮ್ಮ ಮಹಾ ಬೋಧಕನ ಶಿಕ್ಷಣಪೂರಿತವಾದ ಆಜ್ಞೆ “ನಿಮ್ಮ ವೈರಿಗಳನ್ನು ಪ್ರೀತಿಸಿರಿ, ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರಲ್ಲಿ ಪ್ರಾರ್ಥಿಸಿರಿ” ಎಂಬುದನ್ನು ನೆರವೇರಿಸಿದಂತಾಗುವುದು.-Z ’99, 5 (ಖ 2411).

* * *

ಜುಲೈ - 3

ನಾನು ಯೆಹೋವನನ್ನು ಯಾವಾಗಲೂ ನನ್ನೆದುರಿಗೇ ಇಟ್ಟುಕೊಂಡಿದ್ದೇನೆÉ; ಆತನು ನನ್ನ ಬಲಗಡೆಯಲ್ಲಿ ಇರುವುದರಿಂದ ನಾನು ಎಂದಿಗೂ ಕದಲುವದಿಲ್ಲ. -ಕೀರ್ತನೆ 16:8

ಯಾರು ತನ್ನ ಚಿತ್ತವನ್ನು ಕರ್ತನ ಚಿತ್ತದಲ್ಲಿ ಸಂಪೂರ್ಣವಾಗಿ ಮುಳುಗಿಸಿಬಿಟ್ಟಿರುವನೋ ಅಂಥವನು ನಿರಾಶದಾಯಕನಾಗಿರುವುದಿಲ್ಲ. ಅವನು ಜೀವನದ ಎಲ್ಲಾ ಸಂದÀರ್ಭಗಳಲ್ಲಿ ನಂಬಿಕೆಯಿಂದಿದ್ದು, ಕರ್ತನು ಹೇಳಿರುವ ಈ ವಾಕ್ಯವನ್ನು ಅಂದರೆ "ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ" ಹೀಗೆ ದೇವರ ನಡೆಸುವಿಕೆ, ಪರಾಮರಿಕೆಯಲ್ಲಿ ನೆಲೆಗೊಂಡವನಾಗಿರುವನ ಹೃದಯ ಉತ್ತಮ ದರ್ಜೆಯನ್ನು ತಲುಪಿರುವದಕ್ಕೆ ಒಂದು ಸಾಕ್ಷಿ. ನಾವು ನಮ್ಮ ವಿರೋಧಿಯಾದ ಸೈತಾನನ ಎಲ್ಲಾ ರೀತಿಯ ವಿರೋಧ, ಈ ಲೋಕದ ಮತ್ತು ನಮ್ಮ ಶರೀರದ ವಿರೋಧದ ನಿಮಿತ್ತ ಗೊಣಗುಟ್ಟದೆ ಸಂತೋಷವಾಗಿ ತಾಳ್ಮೆಯಿಂದ ಸಹಿಸಿಕೊಂಡು ಇವೆಲ್ಲವು ಪೂರ್ಣಪ್ರೀತಿ ಮತ್ತು ಜ್ಞಾನನಿಧಿಯಾದ ದೇವರಿಂದ ನಮ್ಮ ಅಭ್ಯುದಯಕ್ಕಾಗಿ ನಮಗಾಗುವ ಶಿಕ್ಷಣಪೂರ್ವಕವಾದ ಶಿಕ್ಷಾನುಭವ ಎಂಬುದಾಗಿ ತಿಳಿಯಬೇಕು.-Z '96, 6 (ಖ 2411).

* * *

ಜುಲೈ - 4

ನಾವು ಕೇಳಿದ ಸಂಗತಿಯನ್ನು (ನಮ್ಮಲ್ಲಿ) ಯಾರು ನಂಬಿದ್ದರು? ಯೆಹೋವನ ಬಾಹುವು ಯಾರಿಗೆ ಗೋಚರವಾಗಿತ್ತು? -ಯೆಶಾಯ 53:1

ಈ ಸಮಯದಲ್ಲಿ ದೇವರು ಸಭೆಯನ್ನು ಕರೆದಿರುವುದು ಅವರು ತಮ್ಮ ಬೆಳಕನ್ನು ಜನರ ಮುಂದೆ ಪ್ರದರ್ಶಿಸಲು, ಇದರಿಂದ ಅವರು ಆಕರ್ಷಿತರಾಗಿ ಹಿಂಸೆಗೆ ಒಳಗಾಗುವರು. ನೀತಿಯ ನಿಮಿತ್ತ ಹಿಂಸೆಯನ್ನು ಅನುಭವಿಸಬೇಕಾಗಿರುವದಲ್ಲದೆ ಅವರು ತಮ್ಮ ನಿಲುವನ್ನು ತಾಳ್ಮೆಯುಳ್ಳವರಾಗಿ, ಸರಿಯಾಗಿ, ಸಹೋದರ ಕರುಣೆ, ಸಹಾನುಭೂತಿ ಮತ್ತು ಪ್ರೀತಿಯನ್ನು ತಮ್ಮನ್ನು ಹಿಂಸಿಸುವವರ ಪರವಾಗಿಯಲ್ಲದೆ ಎಲ್ಲಾ ಮನುಷ್ಯರ ಪರವಾಗಿ ವ್ಯಕ್ತಪಡಿಸತಕ್ಕದ್ದು. ಹೀಗಿರುವಲ್ಲಿ ಎಲ್ಲಾ ದೇವಜನರಿಗೆ ದೇವರು ಏರ್ಪಡಿಸಿರುವ ಬಹುಮಾನವನ್ನು ಪಡೆಯಲು, ನಮ್ಮ ಕರ್ತನಾದ ಕ್ರಿಸ್ತನ ಮುಖದಲ್ಲಿ ದೈವ ಪ್ರಭಾವ ಹೊಳೆಯುತ್ತಿರುವುದನ್ನು ವೀಕ್ಷಿಸಿ, ತಂದೆ ದೇವರು ವಿಧಿಸಿರುವ ಶರತ್ತುಗಳು, ಆತನ ಕರೆಯುವಿಕೆ ಮತ್ತು ಸೇವೆಗೆ ವಿಧೇಯರಾಗಿರುವುದು ಯುಕ್ತವಾಗಿದೆ. ಈ ವಿಶೇಷ ಸೇವೆಯನ್ನು ಅಂಗೀಕರಿಸಿರುವ ಎಲ್ಲರು ಉತ್ಸುಕತೆಯಿಂದ ಸೇವೆ ಮಾಡುವಾಗ ಎದೆಗುಂದಬಾರದು. ಮನುಷ್ಯರು ಕೇಳುತ್ತಾರೋ ಅಥವಾ ಕೇಳದೆ ಇರುತ್ತಾರೋ, ಕೆಟ್ಟದ್ದಾಗಿ ಯೋಚಿಸುತ್ತಾರೋ ಅಥವಾ ಕೆಟ್ಟದಾಗಿ ಮಾತಾಡುತ್ತಾರೋ ಅವುಗಳಿಗೆ ನಾವು ನಿರಾಶರಾಗದೆ ನಮ್ಮ ಶಿಸ್ತಿನ ಜೀವನದಲ್ಲಿ ನಮಗೆ ಬರುವ ಎಲ್ಲಾ ಪರೀಕ್ಷೆಗಳು ಮುಗಿದು ಅಂತ್ಯದಲ್ಲಿ ನಮ್ಮ ಲೆಕ್ಕವನ್ನು ಕರ್ತನಿಗೆ "ತನ್ನ ಆಭರಣವನ್ನು ಕೂಡಿಸುವಾಗ" ಒಪ್ಪಿಸಬೇಕು.-Z '99, 10, 11(ಖ 2413).

* * *

ಜುಲೈ - 5

"ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನು ದೇವ ಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನು ಕೆಡವಿ ಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿದು. . . . . .
-2ಕೊರಿಂಥ 10;4,5

ಪ್ರಥಮ ಷರತ್ತು ಅದು ದೇವರು ಅನುಮೋದಿಸುವ ಆತನ ವಾಕ್ಯಕ್ಕೆ ಪ್ರಾಮಾಣಿಕ ವಿಧೇಯತ್ವವೆ ಆಗಿದೆ ಎಂಬದನ್ನು ನಾವು ಜ್ಞಾಪಕದಲ್ಲಿಡೋಣ. ಇದಕ್ಕೆ ಆಧಾರ ಆತನನ್ನು ಪ್ರೀತಿಸುವುದು ಮತ್ತು ಆತನಲ್ಲಿ ನಂಬಿಕೆಯಿಡುವುದು. ನಾವು ಜ್ಞಾಪಿಸಿಕೊಳ್ಳಬೇಕಾಗಿರುವ ಎರಡನೇ ವಿಷಯ ಯಾವುದೆಂದರೆ, ನಮ್ಮ ಅರ್ಹತೆ, ಅಂದರೆ ದೇವರು ನಮ್ಮಿಂದ ನಿರೀಕ್ಷಿಸುವ ಸಹೋದರ ಪ್ರೀತಿ, ಅದರ ಸಂಗಡ ಹಿಂಸೆಯನ್ನು ತಾಳಿಕೊಳ್ಳುವುದು ಮತ್ತು ದೇವರಲ್ಲಿ ತಮ್ಮನ್ನೇ ಪ್ರತಿಷ್ಠಿಸಿಕೊಂಡು ಆತನ ಹೆಜ್ಜೆಯ ದಾರಿಯಲ್ಲಿ ನಡೆಯುತ್ತಿರುವ ಸಹೋದರರ ಪರವಾಗಿ ಸಾಯಲು ಕೂಡ ಸಿದ್ಧನಾಗಿರುವುದು.-Z '99, 11 (ಖ 2413).

* * *

ಜುಲೈ - 6

ಯಾವನು ಯೆಹೋವನಲ್ಲಿ ಭಯ ಭಕ್ತಿಯುಳ್ಳವನೋ ಅವನಿಗೆ ಉಚಿತವಾದ ಮಾರ್ಗವನ್ನು ಆತನು ಭೋಧಿಸುವನು. -ಕೀರ್ತನೆ 25:12

ನಮ್ಮ ಜೀವನದಲ್ಲಿ ಬಂದೊದಗುವ ಪರೀಕ್ಷೆಗಳಾಗಲಿ, ಸಂಕಷ್ಟಗಳಾಗಲಿ ಅವುಗಳನ್ನು ಮೇಲ್ವಿಚಾರಣೆ ಮಾಡುವುದು ನಮ್ಮ ಕೆಲಸವಲ್ಲ. ನಾವು ಮುಕ್ತಮನಸ್ಸಿನಿಂದ ಕರ್ತನಿಗೆ ಪ್ರತಿಷ್ಠೆಪಡಿಸಿಕೊಂಡಿರುವ ಪ್ರಯುಕ್ತ, ಎಷ್ಟೇ ಬೃಹದಾಕಾರದ ಕಷ್ಟಗಳು, ಪರೀಕ್ಷೆಗಳು ಬಂದರೂ ಕರ್ತನ ನಾಯಕತ್ವದಲ್ಲಿ ತ್ಯಾಗಿಗಳಾಗಿ ಆತನ ತೀರ್ಮಾನಕ್ಕೆ ಬಿಡಬೇಕು. ಕರ್ತನ ಪ್ರಕಾರ ಕೆಲವರಿಗೆ ಇತರರಿಗಿಂತ ಹೆಚ್ಚಾಗಿ ವಿಶೇಷ ರೀತಿಯ ಸಂಕಷ್ಟಗಳು, ಪರೀಕ್ಷೆಗಳು ಬಂದರೂ ಕರ್ತನು ಅವುಗಳಿಗೆ ಅವಕಾಶ ಕೊಡಬಹುದು. ಇವರು ಉತ್ಸುಕರಾಗಿ ಆತನ ಸೇವೆಯನ್ನು ಅತ್ಯಂತ ಆಸಕ್ತಿಯಿಂದ ಮಾಡುವರು. ಇವರ ವಿಷಯದಲ್ಲಿ ಕರ್ತನು ಅತಿ ಪ್ರೀತಿಯುಳ್ಳವನಾಗಿದ್ದು, ಇವರಿಂದ ಮಹಾತ್ಯಾಗವನ್ನು ನಿರೀಕ್ಷಿಸುವನು.

ಇಂತಹ ಸೇವೆಯನ್ನು ಮಾಡಿದ ಅಪೋಸ್ತಲನ ಮಾತೇನಂದರೆ "ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತ ಅಧಿಕವಾದ ಪ್ರತಿಫಲವನ್ನು ಉಂಟುಮಾಡಿ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ.-Z '99, 13 (ಖ 2416).

* * *

ಜುಲೈ - 7

"ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ." -ಯೋಹಾನ 1:36

ಕರ್ತನ ಎಲ್ಲಾ ಸೇವಕರು ತಮಗೋಸ್ಕರವಲ್ಲದೆ ಕರ್ತನ ಬಗ್ಗೆ ಲಕ್ಷ್ಯ ಕೊಡಬೇಕು. ನಾವು ನಮ್ಮ ಎಲ್ಲಾ ಸಾಮರ್ಥ್ಯವನ್ನು ಒಗ್ಗೂಡಿಸಿ ನಮ್ಮನ್ನು ನಾವು ಗಮನಿಸದೆ ಮನುಷ್ಯರ ಗಮನವನ್ನು ದೇವರ ಕುರಿಮರಿಯ ಕಡೆ ತಿರುಗಿಸೋಣ. ನಮ್ರತೆ ಎಂಬ ಈ ಗುಣ ಎಲ್ಲೇ ಇದ್ದರೂ ಅದು ಒಂದು ಅಪರೂಪದ ಹವಳವಿದ್ದಂತೆ, ಆತ್ಮನ ಗುಣಗಳಲ್ಲಿ ಇದೂ ಒಂದು. ಕ್ರಿಸ್ತನಿಗಾಗಿ ಪ್ರತಿಷ್ಠೆಪಡಿಸಿಕೊಂಡಿರುವ ಪ್ರತಿಯೊಬ್ಬರು ಈ ಗುಣವನ್ನು ಹೊಂದಿದವನಾಗಿ ಅದನ್ನು ಅಭಿವೃದ್ಧಿಪಡಿಸಿ ಉಜ್ವಲವಾಗಿ ಕಾಣುವಂತೆ ಮಾಡಬೇಕು. ಯೇಸು ಸ್ವಾಮಿಯನ್ನು ಉನ್ನತ ರೀತಿಯಲ್ಲಿ ಅನುಸರಿಸುವದೆಂದರೆ ನಾವು ಆತನ ಪಥದಲ್ಲಿ ನಡೆಯುವುದು. ಆದಷ್ಟುಮಟ್ಟಿಗೆ ಆತನು ಮಾಡಿದಂತೆ ಮತ್ತು ಈ ದಿನದಲ್ಲಿ ಆತನು ಇದ್ದಿದ್ದರೆ ಏನು ಮಾಡುತ್ತಿದ್ದನೋ ಅದನ್ನು ನಾವು ಮಾಡೋಣ. ಆತನು ನುಡಿದು ನಡೆದಂತೆ ಮತ್ತು ಅಪೋಸ್ತಲರ ಮೂಲಕ ಬಿಟ್ಟು ಹೋಗಿರುವ ಪಾಠ ಅಂದರೆ ಅಪೋಸ್ತಲರ ಬೋಧನೆಗಳು, ಅನ್ಯೋನ್ಯತೆ, ಹಿಂಸೆಗಳ ಸಹಿತವಾಗಿ ದೇವರ ರಾಜ್ಯದಲ್ಲಿ ಮಹಿಮಾ ಪದವಿಯನ್ನು ಪಡೆಯುವ ಮಾರ್ಗದಲ್ಲಿ ನಡೆಯೋಣ.-Z '99, 14, 15 (ಖ 2417)

* * *

ಜುಲೈ - 8

ದೇವರ ಮನೆಯಲ್ಲಿ, ಅಂದರೆ ಜೀವ ಸ್ವರೂಪನಾದ ದೇವರ ಸಭೆಯಲ್ಲಿ.

-1ತಿಮೋಥಿ 3:15

ನಮ್ಮ ಕರ್ತನ ಸಭೆಯು, ಎಕ್ಲೀಸಿಯ ಅಥವ ಸಭೆ ಎಂಬ ಒಂದೇ ಪದ ಸತ್ಯ ಸಭೆಗೆ ಮಾತ್ರ ಸರಿಯಾಗಿ ಅನ್ವಯಿಸುವುದು. ಇದು ಎಷ್ಟೊ ಅಲ್ಪವಾದ ತೋರಿಕೆ ರಹಿತವಾದದ್ದು. ಲೋಕದ ಐಶ್ವರ್ಯಕ್ಕೆ ಹೋಲಿಸಿದರೆ, ಇದು ಬಡತನದಲ್ಲಿದೆ. ಲೋಕದ ದೃಷ್ಟಿಯಲ್ಲಿ ಕಾಣದ ಮತ್ತು ಗಣನೆಗೆ ಬಾರದ ಅತ್ಯಲ್ಪವಾದ ವೈಭವಪೂರಿತವಲ್ಲದ ಸಭೆಯಾಗಿದೆ. ಇದು ಮನುಷ್ಯನಿಂದಾದ್ದಲ್ಲ; ಅಥವ ಮನುಷ್ಯಾಡಳಿತಕ್ಕೆ ಒಳಪಟ್ಟಿಲ್ಲ ಅಥವ ಇದರ ಸದಸ್ಯರು ಲೋಕದಲ್ಲಿ ಹೆಸರು ಬರೆಸಿಕೊಂಡವರಲ್ಲ

ಬದಲಾಗಿ ಇವರ ಹೆಸರು ಪರಲೋಕದಲ್ಲಿ ಬರೆಯಲ್ಪಟ್ಟಿದೆ. (ಇಬ್ರಿಯ 12:23) ಈ ಸಭೆಯ ನಾಯಕ ಮತ್ತು ಅಧ್ಯಕ್ಷ ಕರ್ತನೆ. ಇದರ ನಿಯಮ ವಿಧಿ ಆತನ ವಾಕ್ಯವೇ. ಈ ಸಭೆಗೆ ಒಬ್ಬನೆ ಕರ್ತ, ಒಂದೇ ನಂಬಿಕೆ, ಒಂದೇ ದೀಕ್ಷಸ್ನಾನ ಇದು ಅಪೋಸ್ತಲರಿಂದಲೂ ಪ್ರವಾದಿಗಳ ಸಾಕ್ಷಿಗಳ ಆಧಾರದ ಮೇಲೂ ಸ್ಥಾಪಿತವಾಗಿದೆ. ಕ್ರಿಸ್ತನೇ ಇದರ ಮುಖ್ಯವಾದ ಮೂಲೆಗಲ್ಲು.-Z '99, 37 (ಖ 2427).

* * *

ಜುಲೈ - 9

ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತಾನೆ. ಸ್ವಂತ ಕುರಿಗಳನ್ನೆಲ್ಲಾ ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ; ಕುರಿಗಳು ಅವನ ಸ್ವರವನ್ನು ತಿಳುಕೊಂಡು ಅವನ ಹಿಂದೆ ಹೋಗುತ್ತವೆ. -ಯೋಹಾನ 10:4

ಒಳ್ಳೇ ಕುರುಬನ ಧ್ವನಿಯು ನಾನಾ ರೀತಿ ತರದಲ್ಲಿರುವ ಶಬ್ದಗಳನ್ನು ಸಮಂಜಸವಾಗಿ ಒಟ್ಟಿಗೆ ಸೇರಿಸಿ ಮಾಡುವ ಅರ್ಥಪೂರಿತ ಧ್ವನಿಯಾಗಿದ್ದು, ಬೇರೆಯವರ ಧ್ವನಿ ಈ ರೀತಿಯಲ್ಲಿರುವುದಿಲ್ಲ. ಈ ಧ್ವನಿ ನ್ಯಾಯ ಮತ್ತು ಪ್ರೀತಿಯನ್ನೊಳಗೊಂಡ ಸ್ವರಮೇಳದ ಸಮ್ಮಿಲನ ಹಾಗೂ ಜ್ಞಾನ ಮತ್ತು ಶಕ್ತಿಯಿಂದ ಕೂಡಿ ಹೊರಬರುವ ಕರ್ಣಾನಂದಕರ ಸ್ವರ ಮೇಳವಾಗಿರುವುದು. ಜನರ ಮತ್ತು ಸೈತಾನ ಸಿದ್ಧಾಂತಗಳು, ಯೋಚನೆಗಳು, ರಚನೆಗಳು, ಮಹಾಪಾಲಕನಾದ ದೇವರು ತನ್ನ ಮಗನ ಮೂಲಕ ನಮಗೆ ತಲುಪಿಸಿರುವ ಈ ಸ್ವರ, ಧ್ವನಿ ಸಮ್ಮೇಳನಕ್ಕೆ ಹೊಂದಾಣಿಕೆಯಾಗಿರುವುದಿಲ್ಲ. ಇದಲ್ಲದೆ ನಿಜವಾದ ಕುರಿಗಳು ಒಳ್ಳೇ ಕುರುಬನ ಧ್ವನಿಯನ್ನು ಕೇಳಿ ತೃಪ್ತಿಗೊಳ್ಳುತ್ತವೆ. ಬೇರೆ ಯಾವ ಧ್ವನಿಯು ಇಂತಹ ತೃಪ್ತಿಯನ್ನು ಕೊಡುವುದಿಲ್ಲ. ಇವರು ಬೇರೆ ಯಾವ ಸಿದ್ಧಾಂತಗಳು, ತತ್ವಗಳು, ಯೋಚನೆಗಳಿಗೆ ಆಕರ್ಷಕರಾಗುವ ಅಪಾಯವಿರುವುದಿಲ್ಲ, ಬದಲು ಅವರು "ಯೇಸು ಕ್ರಿಸ್ತನು ನನ್ನವನು, ಆತನೇ ನಮ್ಮನ್ನು ತೃಪ್ತಿಪಡಿಸಿರುವನು." ಎಂದು ಉತ್ತರ ಕೊಡುವರು.-Z '00, 230 (ಖ 2672).

* * *

ಜುಲೈ - 10

ಎಲ್ಲರೂ ಆತನನ್ನು ಹೊಗಳಿ ಆತನ ಬಾಯಿಂದ ಹೊರಡುವ ಇಂಪಾದ ಮಾತುಗಳಿಗೆ ಆಶ್ಚರ್ಯ ಪಟ್ಟು . . . . . ಮಾತಾಡಿಕೊಂಡರು. -ಲೂಕ 4:22

ಇದು ಆದಷ್ಟುಮಟ್ಟಿಗೆ ಕರ್ತನ ಹೆಜ್ಜೆಯ ಜಾಡಿನಲ್ಲಿ ನಡೆಯುವ ಎಲ್ಲರಿಗೆ ಸತ್ಯಸಂಗತಿಯಾಗಿರಬೇಕು. ಅವರ ಮಾತುಗಳು ರಸವತ್ತಾಗಿರಬೇಕು ಮತ್ತು ಹದವಾಗಿದ್ದು ಸತ್ಯ ತುಂಬಿದ ಹೃದಯದಿಂದ ಸಹಾನುಭೂತಿ ಮತ್ತು ಪ್ರೀತಿಯಿಂದ ತುಳುಕುತ್ತಾ, ಕೇಳುವವರ ಹಿತಕ್ಕಾಗಿ ಅವರ ಬಾಯಿಂದ ಹೊರಬರಬೇಕು. ಅವರ ಮಾತುಗಳು ಯಾವಾಗಲೂ ಎಲ್ಲೆ ಮೀರದೆ, ಮಿತವಾಗಿದ್ದು ನೀತಿ ಮತ್ತು ಸಕಾರಣವಾಗಿ ಕರ್ತನ ವಾಕ್ಯಕ್ಕನುಸಾರವಾಗಿರಬೇಕು, ಅವರ ನಡವಳಿಕೆ, ರೀತಿ, ನೀತಿ ಎಲ್ಲವೂ

ಜೀವವುಳ್ಳ ಪತ್ರದಂತಿದ್ದು, ಅವರ ವೈರಿಗಳು ಅವರಲ್ಲಿನ ಜ್ಞಾನವನ್ನು ಕಂಡು, ಆಶ್ಚರ್ಯಪಟ್ಟು, ಇವರು ಕ್ರಿಸ್ತನಲ್ಲಿದ್ದು ಕಲಿತವರಲ್ಲವೆ ಎಂಬುದಾಗಿ ಗುರುತಿಸುವಂತಾಗಬೇಕು.-Z '99, 53 (ಖ 2437).

* * *

ಜುಲೈ - 11

ದೇವರಿಂದ ಹುಟ್ಟಿರುವವನು ಪಾಪ ಮಾಡುವವನಲ್ಲವೆಂಬುದು ನಮಗೆ ಗೊತ್ತದೆ; ದೇವರಿಂದ ಹುಟ್ಟಿದಾತನು ಅವನನ್ನು ಕಾಪಾಡುವನು; ಕೆಡುಕನು ಅವನನ್ನು ಹಿಡಿಯುವುದಿಲ್ಲ.

-1ಯೋಹಾನ 5:18

ಎಲ್ಲಿಯವರೆಗೆ ಹೃದಯ (ಮನಸ್ಸು, ಚಿತ್ತ) ಶುದ್ಧವಾಗಿದ್ದು, ನೀತಿ ಮತ್ತು ದೇವರೊಂದಿಗೆ ಹೊಂದಾಣಿಕೆಯಾಗಿರುವುದೋ ಅಂದರೆ ಶುದ್ಧತ್ವ ಮುಂದುವರೆಯುವುದೋ, ಅಲ್ಲಿಯವರೆಗೆ ನೂತನ ಮನಸ್ಸು ಪಾಪವನ್ನು ಒಪ್ಪುವುದಿಲ್ಲ ಮತ್ತು ಪಾಪವನ್ನು ವಿರೋಧಿಸುತ್ತದೆ. ನಮ್ಮ ಅಂಗಾಗಳಲ್ಲಿರುವ ಸ್ವಾಭಾವಿಕವಾದ ಬಲಹೀನತೆ, ಆಶೆ ಆಕಾಂಕ್ಷೆಗಳ ವಿರುದ್ಧ ಸತತ ಹೋರಾಟ ನಮ್ಮಲ್ಲಿ ನಡೆಯುತ್ತಿದ್ದರೂ, ನಾವು ಈ ಶಾರೀರಿಕ ಅಂಶಗಳಿಂದ ಪ್ರತ್ಯೇಕವಾಗಿರುವವರಾಗಿದ್ದೇವೆ. ನಮ್ಮ ಬಲಹೀನತೆ, ಅಪರಿಪೂರ್ಣತೆಯು ಯೇಸು ಕ್ರಿಸ್ತನಲ್ಲಿ ಹೊಂದಿರುವ ನೂತನ ಮನಸ್ಸಿಗೆ ಅನ್ವಯಿಸದೇ, ಇವುಗಳು ಕ್ರಿಸ್ತನು ಸಮರ್ಪಿಸಿದ ವಿಮೋಚನೆಯ ಯಜ್ಞದ ಫಲವನ್ನು ನಮಗೆ ಅನ್ವಯಿಸುವಾಗ ಮುಚ್ಚಲ್ಪಟ್ಟಿವೆ ಎಂದು ಪರಿಗಣಿಸಲ್ಪಡುವುದು.-Z '99, 58 (ಖ 2438).

* * *

ಜುಲೈ - 12

ಆದದರಿಂದ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವುದು.
-ಯೋಹಾನ 8:36

ಮಹಾಬೋಧಕನ ಮಾತುಗಳಿಗೆ ಕಿವಿಗೊಡುವ ನಿಜ ಶಿಷ್ಯರು ಎಲ್ಲಾ ವಿಷಯಗಳಲ್ಲಿ ಮುಂದುವರಿದು, ಅಜ್ಞಾನ ಮೂಢನಂಬಿಕೆಗಳಿಂದ ಬಿಡುಗಡೆ ಹೊಂದಿ ಪಾಪವನ್ನು ವಿಸರ್ಜಿಸಿ ತಮ್ಮಲ್ಲಿರುವ ಸ್ವಾಭಾವಿಕ ಬಲಹೀನತೆ, ಕುಂದು ಕೊರತೆಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಂಡು ದೈವಿಕ ಮನಸ್ಸನ್ನು ಅಂದರೆ ಸತ್ಯವನ್ನು ಮೆಚ್ಚುವರು. ಈ ಬಿಡುಗಡೆ ಇವರನ್ನು ಗಾಸಿಪಡಿಸದೆ ಆಶೀರ್ವದಿಸುವುದು. ಅಹಂಕಾರ ಮತ್ತು ಉದ್ಧಟತನವನ್ನು ತೆಗೆದು ಹಾಕಿ ದೀನಸ್ವಭಾವವನ್ನು ಹುಟ್ಟಿಸುವುದು. ಕೋಪಕ್ಕೆ ಬದಲು ಶಾಂತಿಯನ್ನು ತರುವುದು, ಸ್ವಾರ್ಥತೆ ಮತ್ತು

ಮತ್ಸರಕ್ಕೆ ಬದಲು ಉದಾರತ್ವವನ್ನು ಮತ್ತು ದಯೆಯನ್ನು ತರುವದು, ಅತೃಪ್ತಿ ಮತ್ತು ನಿಷ್ಠುರಕ್ಕೆ ಬದಲು ಸಂತೋಷ ಮತ್ತು ಸಮಾಧಾನವನ್ನು ತರುವುದು ನಿಜವಾಗಿಯೂ ದೇವರ ಮಗನು ನಮ್ಮನ್ನು ಬಿಡುಗಡೆ ಮಾಡುವನು.-Z '99, 57 (ಖ 2438).

* * *

ಜುಲೈ - 13

ಇದೇನು ಆಶ್ಚರ್ಯವಲ್ಲ; ಸೈತಾನನು ತಾನೇ ಪ್ರಕಾಶರೂಪವುಳ್ಳ ದೇವ ದೂತನ ವೇಷವನ್ನು ಹಾಕಿಕೊಳ್ಳುವಾಗ ಅವನ ಸೇವಕರು ಸಹ ನೀತಿಗೆ ಸೇವಕರಾಗಿ ಕಾಣಿಸುವುದಕ್ಕೆ ವೇಷ ಹಾಕಿಕೊಳ್ಳುವುದು ದೊಡ್ಡದ್ದಲ್ಲ. -2ಕೊರಿಂಥ 11:14,15

ಸೈತಾನನು ಒಳ್ಳೆಯ ಕೆಲಸವನ್ನು ಮಾಡಲು ಅವನಿಗೆ ಹೇಗೆ ಆಸಕ್ತಿ ಬಂತು ಎಂಬುದಾಗಿ ಯಾರಾದರೂ ಪ್ರಶ್ನೆ ಮಾಡುವುದಾದರೆ ಅವರಿಗೆ ನಾವು ಈ ಉತ್ತರವನ್ನು ಕೊಡುತ್ತೇವೆ. ಅಪಾದಕ ದೇವ ದೂತನ ಪ್ರಕಾಶರೂಪವುಳ್ಳ ಮತ್ತು ಕರುಣೆಯಿಂದ ಕೂಡಿದ ದೇವ ದೂತನ ವೇಷವನ್ನು ಹಾಕಿಕೊಳ್ಳುವುದು ಈ ಲೋಕದ ಬೆಳಕಾಗಿರುವವನ ಬಳಿಗೆ ಕೊಂಡಯ್ಯುವುದಕ್ಕಲ್ಲ ಅಥವ ಯೇಸು ಕ್ರಿಸ್ತನ ಶಿಲುಬೆಯ ಬಳಿಗೆ ಕೊಂಡಯ್ಯುವದಕ್ಕಲ್ಲ ಅಥವ ಸತ್ಯವೇದದ ಬಳಿಗೆ ಕೊಂಡೊಯ್ಯುವುದಕ್ಕಲ್ಲ ಬದಲು ಇವೆಲ್ಲವುಗಳಿಂದ ಬೇರೊಂದು ರಕ್ಷಣಾ ನಿರೀಕ್ಷೆಗೂ ಬೇರೊಬ್ಬ ಉಪದೇಶಕನ ಬಳಿಗೂ, ಸಾಧ್ಯವಾದರೆ ದೇವಾರಾದುಕೊಂಡವರನ್ನು ಮೋಸಗೊಳಿಸಲಿಕ್ಕೆ ಕೊಂಡೊಯ್ಯುವಂತವನು. ಕರ್ತನು ಹೇಳಿರುವುದನ್ನು ಜ್ಞಾಪಿಸಿಕೊಳ್ಳಿರಿ ಅದೇನಂದರೆ, ಸೈತಾನನು ಸೈತಾನನನ್ನು ಬಿಡಿಸುವದಕ್ಕಾಗಿ ರೋಗವನ್ನು ವಾಸಿಮಾಡುವ ಸ್ಥಿತಿಗೆ ಬಂದರೆ ಅವನ ಸಿಂಹಾಸನವು, ಆಡಳಿತದ ಅಂತ್ಯವು ಬಂತೆಂದು ತಿಳಿಯಿರಿ. ಇದು ಅಪಾದಕ ದೂತನು, ಸೈತಾನನು ಮೋಸಮಾಡುವ ಕೊನೆಯ ಕುತಂತ್ರವಾಗಿದೆ.-Z '99, 62 (ಖ 2667).

* * *

ಜುಲೈ - 14

ಎಲ್ಲಾ ದ್ವೇಷ, ಕೋಪ, ಕ್ರೋಧ, ಕಲಹ, ದೂಷಣೆ ಇವುಗಳನ್ನೂ ಸಕಲ ವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರಮಾಡಿರಿ. -ಎಫೆಸ 4:31

ದೈವೀಕ ಧರ್ಮ ಶಾಸ್ತ್ರವನ್ನು ಅತ್ಯುನ್ನತ ಸ್ಥಾನದಲ್ಲಿರಿಸಿ ಅದನ್ನು ಮೆಚ್ಚಿ ಅಭಿವೃದ್ಧಿಯಾಗಿರುವ ಕ್ರೈಸ್ತರು, ಕರ್ತನು ನೋಡುವ ದೃಷ್ಟಿಯಲ್ಲಿ ನೋಡುವದಾದರೆ, ದ್ವೇಷಿಸುವುದು ಕೊಲೆಗೆ ಸಮನಾಗಿಯೂ, ದೂಷಿಸುವುದು ತಲೆತೆಗೆಯುವದಕ್ಕೆ ಸಮಾನವಾಗಿಯೂ ನೆರೆಯವನು ಪಡೆದಿರುವ ಒಳ್ಳೆಯ ಹೆಸರನ್ನು ನಾಶಪಡಿಸುವುದು ಕಳ್ಳತನ ಮತ್ತು ಅತ್ಯಾಚಾರಕ್ಕೂ ಸಮವಾಗಿದೆ. ಈ ಯಾವುದಾದರೂ ಒಂದು ತತ್ವವನ್ನು ಸಭೆಯಲ್ಲಿ ಅಂದರೆ ದೇವಜನರ ಮಧ್ಯದಲ್ಲಿ ಮಾಡುವದಾದರೆ ಅದು ಎರಡರಷ್ಟು

ಕೆಟ್ಟದಾಗಿರುವುದು. ಸಹೋದರನ ಹೆಸರನ್ನು ನಾಶ ಪಡಿಸುವುದು ದರೋಡೆಗೆ ಸಮನಾಗಿರುವುದು. ಇಲ್ಲಿ ಒಂದೇ ಒಂದು ವಿನಾಯಿತಿ ಇದೆ. ಅದಾವುದೆಂದರೆ, "ಯಾರ ಬಗ್ಗೆಯೂ ಕೆಟ್ಟದಾಗಿ ಮಾತನಾಡಬಾರದು" ಒಂದು ವೇಳೆ ಒಬ್ಬ ಸಹೋದರನು ಕೆಟ್ಟದಾಗಿ ವರ್ತಿಸುವುದನ್ನು ಗಮನಿಸಿ ಅದನ್ನು ಬೆಳಕಿಗೆ ತರಲು ಮನಸಿಲ್ಲದೆ ಇದ್ದರೂ, ಅನಿವಾರ್ಯವಾಗಿ ತಿಳಿಸಲೇಬೇಕಾಗುವುದು. ಯಾಕಂದರೆ, ನಾವು ಸಹೋದರರನ್ನು ಪ್ರೀತಿಸುತ್ತೇವೆ. ತಿಳಿಸದೆ ಬಿಟ್ಟರೆ ಅದರಿಂದ ಅವರಿಗೆ ಹಾನಿಯಾಗುವುದು. -Z '99, 71 (ಖ 2442).

* * *

ಜುಲೈ - 15

ನನಗಿರುವದೆಲ್ಲವನ್ನು ಅನ್ನದಾನ ಮಾಡಿದರೂ . . . . . . . . ಪ್ರೀತಿಯು ನನಗಿಲ್ಲದಿದ್ದರೆ ನನಗೇನು ಪ್ರಯೋಜನವಾಗುವುದಿಲ್ಲ. -1ಕೊರಿಂಥ 13:3

ನಾವು ಇತರರಿಗಾಗಿ ಸೇವಾಕಾರ್ಯ ಮಾಡುವಾಗ ಅವರು ನಮ್ಮಿಂದ ಬರೀ ಹಣವನ್ನು ನಿರೀಕ್ಷಿಸುವವರೆಂಬದಾಗಿ ತಿಳಿಯಬಾರದು. ಕೆಲವರು ನಮ್ಮಿಂದ ಪ್ರೀತಿ ಮತ್ತು ಅನುಕಂಪವನ್ನು ಅಪೇಕ್ಷಿಸುತ್ತಾರೆಯೇ ಹೊರತು ಹಣವನ್ನಲ್ಲ. ನಮ್ಮ ಕರ್ತನು ಇಂತಹವರಲ್ಲಿ ಒಬ್ಬನಾಗಿದ್ದಾನೆ. ಆತನು ಪ್ರೀತಿಯಿಂದ ತುಂಬದವನಾಗಿರುವಂತೆ ಮತ್ತು ಪ್ರೀತಿಸಿದಂತೆ ಮಾನವರಲ್ಲಿ ಅತಿಶ್ರೇಷ್ಠರಾದ ಅಪೋಸ್ತಲರು ಸಹ ಇಂತಹ ಪ್ರೀತಿಯನ್ನು ಕರ್ತನಲ್ಲಿ ತೋರಿಸಲಿಲ್ಲ. ಆದರೆ ಕರ್ತನು ಇಂತಹ ಪ್ರೀತಿಯನ್ನು ಮರಿಯಳಲ್ಲಿ ಕಂಡನು. ಈಕೆಯು ಕರ್ತನನ್ನು ಇತರರಿಗಿಂತ ಅತಿ ಹೆಚ್ಚಾಗಿ ಪ್ರೀತಿಸುತ್ತಿದ್ದಳು. ಕರ್ತನ ನಡವಳಿಕೆಯನ್ನು ಮತ್ತು ಗುಣವನ್ನು ಇತರರಿಗಿಂತ ಹೆಚ್ಚಾಗಿ ಅರ್ಥಮಾಡಿಕೊಂಡಿದ್ದಳು. ಈಕೆಯು ಕರ್ತನಿಂದ ಕಲಿತುಕೊಳ್ಳಲಿಲ್ಲ. ಸಂತೋಷದಿಂದ ಆತನ ಪಾದದ ಹತ್ತಿರ ಕೂತುಕೊಳ್ಳುವುದಲ್ಲದೆ, ಆತನ ಪಾದವನ್ನು ಬಹುಬೆಲೆಯುಳ್ಳ ಸುಂಗಧ ತೈಲದಿಂದ ತೋಯಿಸಿ ತನ್ನ ತಲೆ ಕೂದಲಿಂದ ಒರೆಸಿದಳು. ಈ ಒಂದು ಕಾರ್ಯ ಆಕೆ ಕರ್ತನ ಸಂಸರ್ಗದಲ್ಲಿ ಇದ್ದು ತೋರಿಸಿದ ಪ್ರೀತಿ ಮತ್ತು ಭಕ್ತಿಯನ್ನು ವ್ಯಕ್ತಪಡಿಸುತ್ತದೆ.-Z '99, 77 (ಖ 2447)

* * *

ಜುಲೈ - 16

ಆದರೆ ಪವಿತ್ರಾತ್ಮ ಭರಿತರಾಗಿದ್ದು, -ಎಫೆಸ 5:19

ನಾವು ಎಷ್ಟರ ಮಟ್ಟಿಗೆ ನಮ್ಮ ಸ್ವಂತ ಚಿತ್ತವನ್ನು ತ್ಯಜಿಸುತ್ತೇವೆಯೋ ಅಷ್ಟರಮಟ್ಟಿಗೆ ನಾವು ನಂಬಿಕೆ ಮತ್ತು ವಿಧೇಯತ್ವಗಳಿಂದ ಆತ್ಮಭರಿತರಾಗುತ್ತೇವೆ. ನಮ್ಮ ದಿನ ನಿತ್ಯದ ಜೀವನದಲ್ಲಿ ವಿಧೇಯತ್ವವು ಪ್ರಕಟವಾಗದೆ ಇನ್ನೇನು ಮಾಡಲಾಗುವುದಿಲ್ಲ. ಅದೇನೆ ಇದ್ದರು ತನಗೆ ಪ್ರತಿಷ್ಠೆಪಡಿಸಿಕೊಂಡಿರುವ ವಿಧೇಯತ್ವವನ್ನು ಮತ್ತು ಅವರ ಹೃದಯದ ಅಂತರಾಳದ ಚಿತ್ತವನ್ನು

ಕರ್ತನು ಪರಿಗಣಿಸುವನು. ಕೆಲವರ ಹೃದಯವು ಸಂಪೂರ್ಣವಾಗಿ. ಪ್ರಾಮಾಣಿಕವಾಗಿ ಕರ್ತನಿಗೆ ಒಪ್ಪಿಸಲ್ಪಟ್ಟಿರುವುದನ್ನು ಕರ್ತನು ಮೆಚ್ಚುವನು. ಮತ್ತೆ ಕೆಲವರು ತಮ್ಮ ತೋರಿಕೆಯ ನೀತಿವಂತಿಕೆಯಿಂದ ಮನುಷ್ಯರ ದೃಷ್ಟಿಯಲ್ಲಿ ಮೆಚ್ಚುಗೆ ಗಳಿಸಿದರೂ, ದೇವರ ಚಿತ್ತ ಮತ್ತು ಆತನ ದೃಷ್ಟಿಯಲ್ಲಿ ಅಸಹ್ಯರಾಗಿ ಕಾಣಬರುವರು. ಅವರ ಹೃದಯ ದೇವರ ವಿಷಯದಲ್ಲಿ ಅಪ್ರಾಮಾಣಿಕತೆಯಿಂದಲೂ, ಉದಾಸೀನತೆಯಿಂದಲೂ ಕೂಡಿರುವುದು. ಯಾರು ನೂತನ ನಿರೀಕ್ಷೆ, ನೂತನ ಆತ್ಮ ಹೊಂದಿರುವರೋ ಅಂತಹವರು, ತಮ್ಮ ಮನಸ್ಸು, ಯೋಚನೆಗಳು, ಮಾತು ಮತ್ತು ಕೃತಿಗಳನ್ನು ಶುದ್ಧೀಕರಿಸಿಕೊಂಡು ಪ್ರತ್ಯಕ್ಷವಾಗಿಯೂ, ಪರೋಕ್ಷವಾಗಿಯೂ ನೀತಿವಂತರಾಗಿ ನಡೆಯುವರು.-Z ’99, 92 (ಖ 2455).

* * *

ಜುಲೈ - 17

ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ.

-ಯೆಶಾಯ 26:3

ಇದು ಲೋಕದ ಶಾಂತಿಯಲ್ಲ, ತಾರತಮ್ಯದ ಶಾಂತಿಯಲ್ಲ, ಆಲಸಿಕೆಯ ಶಾಂತಿಯಲ್ಲ, ಸ್ವಾರ್ಥ ಸ್ವೇಚ್ಛಾಚಾರದ ಶಾಂತಿಯಲ್ಲ. ವಿಧಿನಿಯತ ಶಾಂತಿಯಲ್ಲ. ಆದರೆ ಇದು ಕ್ರಿಸ್ತೀಯ ಶಾಂತಿ, “ನನ್ನಲ್ಲಿರುವಂತ ಶಾಂತಿ” ನಮ್ಮ ನಾಯಕನನ್ನು ಹಿಂದಿರುಗಿ ನೋಡುವದಾದರೆ ಎಲ್ಲಾ ಸಂದರ್ಭಗಳಲ್ಲೂ, ಎಲ್ಲಾ ಸ್ಥಿತಿಗಳಲ್ಲಿಯೂ ಕರ್ತನು ದೇವರ ಶಾಂತಿಯಲ್ಲಿ ನೆಲೆಗೊಂಡಿದ್ದನು. ಇದು ದೈವ ಜ್ಞಾನ, ಪ್ರೀತಿ, ನೀತಿ ಮತ್ತು ಶಕ್ತಿಯಲ್ಲಿ ದೃಢ ವಿಶ್ವಾಸಪಡುವಂತದ್ದು, ಕರ್ತನಲ್ಲಿರುವ ನಂಬಿಗಸ್ತರಿಗೆ ದೇವರು ವಾಗ್ದಾನ ಮಾಡಿರುವ ಅನುಗ್ರಹಪೂರಿತ ದಿವ್ಯಶಾಂತಿ ಅಂದರೆ ಅವರನ್ನು ಯಾವ ರೀತಿಯಲ್ಲೂ ಹಾನಿ ಮಾಡುವಂತದಲ್ಲ. “ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ” . ಈ ಶಾಂತಿಯು ದೈವಾನುಗ್ರಹದಿಂದ ಒದಗುವ ಯಾವುದನ್ನೇ ಆಗಲಿ ನಂಬಿಕೆಯಿಂದ ಅಂಗೀಕರಿಸುವುದು ಮತ್ತು ಅಂತ್ಯದಲ್ಲಿ ಕರ್ತನು ವಾಗ್ದಾನ ಮಾಡಿ ದಯ ಪಾಲಿಸುವ ಪರಮ ಆಶೀರ್ವಾದವನ್ನು ಸಂತೋಷದ ಕಣ್ಣೀರಿನ ಮೂಲಕ ನಿರೀಕ್ಷಿಸುತ್ತಾ ಅದರ ಪೂರ್ವಾನುಭವದ ರುಚಿಯನ್ನು ಈಗ ಕಂಡುಕೊಂಡಿದೆ.-Z ’99, 95 (ಖ 2455).

* * *

ಜುಲೈ - 18

ಆದರೆ ಕಡೇ ದಿವಸಗಳಲ್ಲಿ ಕಠಿಣ ಕಾಲಗಳು ಬರುವವೆಂಬದನ್ನು ತಿಳಿದುಕೋ, ಮನುಷ್ಯರು ಸ್ವಾರ್ಥಚಿಂತಕರೂ..........ದ್ರೋಹಿಗಳು......... ಉಬ್ಬಿಕೊಂಡವರು. ದೇವರನ್ನು ಪ್ರೀತಿಸದೆ ಭೋಗಗಳನ್ನೇ ಪ್ರೀತಿಸುವವರೂ. --2ತಿಮೋಥಿ 3:1,4

ನಿಜವಾದ ಕ್ರೈಸ್ತನು, ಉಬ್ಬಿಕೊಂಡವನಲ್ಲ, ಬದಲು ಅವನು ಕರ್ತನಿಗೆ ಪ್ರತಿಷ್ಠೆಪಡಿಸಿಕೊಂಡಾಗಲೇ ಸಾಂಕೇತಿಕವಾಗಿ ತಲೆಹೊಯಿಸಿಕೊಂಡವನಾಗುತ್ತಾನೆ. ತನ್ನ ತಲೆಯನ್ನು ಕಳೆದುಕೊಳ್ಳುತ್ತಾನೆ. ತನ್ನ ಚಿತ್ತವನ್ನು ಮತ್ತು ತನ್ನನ್ನು ತಾನು ಆಳುವದನ್ನು ತ್ಯಾಗಮಾಡಿ ಕ್ರಿಸ್ತನ ಶಿಷ್ಯನಾಗಿ ತನ್ನನ್ನು ತಾನು ನಾಯಕನು ತಲೆಯಾಗಿರುವ ಕ್ರಿಸ್ತನಿಗೆ ಒಪ್ಪಿಸುತ್ತಾನೆ. ಹೀಗಿರುವಲ್ಲಿ ನಿಜ ಕ್ರೈಸ್ತನು ತನ್ನ ಜೀವನದ ಪ್ರತಿಯೊಂದು ವ್ಯವಹಾರ ಅಂದರೆ, ಸಂತೋಷ ಭಾರ, ಹೊರೆ, ಪರೀಕ್ಷೆಗಳು, ಸಂದರ್ಭಗಳು, ಸಮಯಗಳು ಎಲ್ಲದರ ವಿಷಯವಾಗಿ ಕರ್ತನ ಆಜ್ಞೆ ನಡೆಸುವಿಕೆಯನ್ನು ನಿರೀಕ್ಷಿಸುವನು; ಆ ಸಂದರ್ಭಗಳಲ್ಲಿ ಏನು ಹೇಳಬೇಕು, ಏನು ಮಾಡಬೇಕು ಎಂಬುದನ್ನಲ್ಲದೆ ತನ್ನ ಮನಸ್ಸಿನ ಯೋಚನೆಗಳು, ಚಿತ್ತವೆಲ್ಲವನ್ನು ದೇವರಲ್ಲಿರುವ ಕ್ರಿಸ್ತನಿಗೆ ಸಂಪೂರ್ಣವಾಗಿ ಒಪ್ಪಿಸುವನು.-Z '99, 102 (ಖ 2459).

*   *   *

ಜುಲೈ - 19

ತಂದೆಯು ನನಗೆ ಕೊಟ್ಟಿರುವ ಪಾತ್ರೆಯಲ್ಲಿ ನಾನು ಕುಡಿಯಬಾರದೋ. . . . . .

-ಯೋಹಾನ 18:11

ನಮ್ಮ ಕರ್ತನ ಸೇವೆಯಲ್ಲಿ ಆತನಲ್ಲಿದ್ದಂತ ದೀನ ಸ್ವಭಾವ ಪ್ರತಿಯೊಂದು ಸಂದರ್ಭದಲ್ಲೂ ಎದ್ದು ಕಾಣುತ್ತಿತ್ತು ಮತ್ತು ತನ್ನನ್ನು ತಾನು ವೈರಿಗಳಿಗೆ ಒಪ್ಪಿಸಿಕೊಟ್ಟಾಗಲೂ ತನ್ನಷ್ಟಿಗೆ ತಾನೇ ಶರಣಾಗುತ್ತಿದ್ದೇನೆ ಎಂಬುದಾಗಿ ಹೇಳದೆ, ಸತ್ಯಕ್ಕಾಗಿ ತಾನು ರಕ್ತಸಾಕ್ಷಿಯಾಗುತ್ತಿದ್ದೇನೆಂದು ಕೂಡ ಅರಸದೆ, ತಂದೆಯು ತನ್ನ ಪ್ರಮಾಣಿಕತನದ ಸಾಕ್ಷಿಯಾಗಿ ಈ ಮಾರ್ಗವನ್ನು ಏರ್ಪಡಿಸಿದ್ದಾನೆ ಎಂಬ ಈ ಸಾದಾರಣ ಸತ್ಯವನ್ನು ಹೊರಪಡಿಸಿದನು. ಆತನು ತಾನು ದೇವರ ಸೇವಕನು ಎಂದು ಸಾಕ್ಷಿ ಹೇಳಿ ಮಗನಾಗಿ ಹಿಂಸೆಗಳ ಸಹಿತವಾಗಿ ವಿಧೇಯತ್ವವನ್ನು ಕಲಿತುಕೊಂಡೆನು ಎಂಬುದಾಗಿ ಹೇಳಿದ್ದಾನೆ. ಇದಕ್ಕಿಂತ ಹೆಚ್ಚಾಗಿ ದೇವರ ಸೇವಕರಿಗೆ ಬೇರೆ ಪಾಠ ಬೇಕಿಲ್ಲ. ಕರ್ತನ ಸೇವಕರು ತಂದೆಯು ಕೊಟ್ಟಿರುವ ಪಾತ್ರೆಯನ್ನು ಮನಃಪೂರ್ವಕವಾಗಿ ಕುಡಿಯುವದಾದರೆ. ದೇವರು ನಮ್ಮನ್ನು ಗಣನೆಗೆ ತೆಗೆದುಕೊಂಡು ನಾವು ನಡೆಯುತ್ತಿರುವ ದಾರಿಯಲ್ಲಿ ನಮಗೆ ಎಲ್ಲಾ ವಿಷಯಗಳಲ್ಲೂ ಮಾರ್ಗದರ್ಶನ ಕೊಡುತ್ತೆ. ಏಕೆಂದರೆ, ನಾವು ಅಭಿಷೇಕ್ಷಿಸಲ್ಪಟ್ಟದ್ದು ಕ್ರಿಸ್ತನ ಶಿಷ್ಯರಾಗುವದಕ್ಕೆ ಎಂಬುದನ್ನು ತೋರಿಸಿದ್ದಾರೆ.-Z '99, 118 01, 91 (ಖ 2467, 2778).

*   *   *

ಜುಲೈ - 20

ನಾನೇ ನಿಜವಾದ ದ್ರಾಕ್ಷೇಬಳ್ಳಿ. ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ; ಫಲ ಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲ ಕೊಡುವ ಹಾಗೆ ಅದನ್ನು ಶುದ್ಧಿ ಮಾಡುತ್ತಾನೆ. -ಯೋಹಾನ 15:1,2

ಉತ್ತಮ ಫಲ ಕೊಡುವÀ ಒಳ್ಳೆಯ ದ್ರಾಕ್ಷಿ ಕೊಂಬೆಗಳು ಶುದ್ಧೀಕರಣಕ್ಕೆ ಒಳಗಾಗುವುದು ಎಂದ ಮೇಲೆ ಕರ್ತನ ನಂಬಿಗಸ್ತ ಪ್ರಾಮಾಣಿಕ ಜನರು ಕರ್ತನ ಶಿಕ್ಷಣಕ್ಕೂ ಮತ್ತು ಆತನ ಅನುಗ್ರಹಪೂರಿತ ಪಾಲನೆಗೊಳಗಾಗುವರು. ಇಲ್ಲದಿದ್ದರೆ ಅವರು ಬಹುಬೇಗ ಆಲಸ್ಯಗಾರರಾಗಿ ಹೆಚ್ಚಿನ ಫಲವನ್ನು ಕೊಡಲಾರದೆ ಹೋಗುವರು. ದೇವರ ನಿಜವಾದ ಮಕ್ಕಳು ತಮ್ಮ ಚಿತ್ತವನ್ನು ಕರ್ತನಲ್ಲಿ ಸಂಪೂರ್ಣವಾಗಿ ಮುಳುಗಿಸಿರುವದರಿಂದ ಕರ್ತನ ಶಿಕ್ಷಣಕ್ಕೆ ಅಥವ ಕೊಂಬೆ ಕತ್ತರಿಸಿ ಶುದ್ಧಿಗೊಳಿಸುವಿಕೆಯಿಂದ ಅಧೈರ್ಯ ಅಥವ ಅಸಂತೋಷಿಸುವುದಿಲ.ಿಲ ತಮ್ಮಲ್ಲಿನ ಅಜ್ಞಾನವನ್ನು ಅರಿತು ಕರ್ತನಲ್ಲಿರುವ/ತೋಟಗಾರನಲ್ಲಿರುವ ಮಹಾಜ್ಞಾನದ ಪರಾಮರಿಕೆಯಲ್ಲಿ ವಿಶ್ವಾಸವಿಡುವರು. ಯಾವಾಗ ದೈವಾನುಗ್ರಹ ತಾನು ನಡೆಯುತ್ತಿರುವ ದಾರಿ ಸರಿಯಾದುದಲ್ಲ ಎಂಬದಾಗಿ ತಿಳಿಸುತ್ತದೋ ಆಗ, ದೈವಾನುಗ್ರಹ ನಿರ್ದೇಶಿಸುವ ದಾರಿಯಲ್ಲಿ ನಡೆಯುವದೇ ಶ್ರೇಷ್ಠವೆಂದು ಎಣಿಸಿ ಆ ದಾರಿಯನ್ನು ಬಿಟ್ಟು ಕರ್ತನ ನೇತೃತ್ವದಲ್ಲಿ ಸಂತೋಷವಾಗಿ ನಡೆದು ಅದರಿಂದ ಆಶೀರ್ವಾದ ಪಡೆಯುವರು.-Z '99, 109 (ಖ 2464).

* * *

ಜುಲೈ - 21

ನಾನು ಸತ್ಯದ ವಿಷಯದಲ್ಲಿ ಸಾಕ್ಷಿ ಹೇಳುವದಕ್ಕೋಸ್ಕರ ಹುಟ್ಟಿದವನು, ಅದಕೋಸ್ಕರವೇ ಈ ಲೋಕಕ್ಕೆ ಬಂದಿದ್ದೇನೆ. -ಯೋಹಾನ 18:37

ನಮ್ಮ ಕರ್ತನು ಸತ್ಯದ ವಿಷಯದಲ್ಲಿ ನಂಬಿಗಸ್ತನಾಗಿದ್ದುದರ ಪರಿಣಾಮವಾಗಿ ಸೈತಾನನಿಂದ ಕುರುಡಾಗಿರುವವರ ವಿರೋಧ ಆತನ ಮೇಲೆ ಎರಗಿ ಬಂದವು. ಆತನು ಸತ್ಯದ ವಿಷಯದಲ್ಲಿ ಸಾಕ್ಷಿ ಕೊಟ್ಟದ್ದರಿಂದ ಆತನ ಜೀವವನ್ನೇ ತೆಗೆದುಕೊಂಡಿತು. ಸತ್ಯದ ವಿಷಯಕ್ಕೆ ತನ್ನ ಪ್ರಾಣವನ್ನೇ ಕೊಟ್ಟು ಹೋರಾಡಿದನು. ಅದೇ ನಮ್ಮ ವಿಮೋಚನೆಯ ಬೆಲೆಯಾಯಿತು. ಅದೇ ರೀತಿಯಲ್ಲಿ ಕರ್ತನ ಶಿಷ್ಯರೆಲ್ಲರೂ ಸತ್ಯದ ವಿಷಯದಲ್ಲಿ ಸಾಕ್ಷಿಕೊಡಬೇಕು. ಅಂದರೆ ಸತ್ಯವನ್ನೊಳಗೊಂಡ ದೇವರ ಯೋಜನೆ ಮತ್ತು ಆತನ ಗುಣಲಕ್ಷಣಗಳು ಈ ರೀತಿಯಾಗಿ ಸತ್ಯದ ಪರವಾಗಿ ಸಾಕ್ಷಿಕೊಡುವುದರಿಂದ ಕರ್ತನ ನಿಜ ಅನುಯಾಯಿಗಳು ಕ್ರಿಸ್ತನ ಮೂಲಕ ದೇವರಿಗೆ ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ ಪರಿಶುದ್ಧವಾಗಿ ಇರುವ ಸಜೀವ ಯಜ್ಞವಾಗುವರು. ದೇವರ ರಾಜ್ಯದಲ್ಲಿ ಜೀವ ನಾಯಕನ ಜೊತೆಯಲ್ಲಿ ಇರಬೇಕೆಂದು ನಿರೀಕ್ಷಿಸುವ ಪ್ರತಿಯೊಬ್ಬನು ಸತ್ಯದ ವಿಷಯದಲ್ಲಿ ಪ್ರಾಮಾಣಿಕವಾಗಿ ಸಾಕ್ಷಿ ಕೊಡಲಿ ಅಂದರೆ ದೇವರ ರಾಜ್ಯದ ವಿಷಯದಲ್ಲಿ ಒಂದು ಶ್ರೇಷ್ಠ ಸಾಕ್ಷಿಯೇ ಅದರ ಭೂನಾದಿ, ಅದರ ಮೇಲೆ ಅತಿಶ್ರೇಷ್ಠ ಮಹಿಮೆಯುಳ್ಳ ಕಟ್ಟಡವಾಗಿ ಪರಿಣಮಿಸಿವುದು.-Z '99, 123 (ಖ 2470).

* * *

ಜುಲೈ - 22

ಮುರಿದ ಮನಸ್ಸುಳ್ಳವರಿಗೆ ಯಹೋವನು ನೆರವಾಗುತ್ತಾನೆ; ಕುಗ್ಗಿ ಹೋದವರನ್ನು ಉದ್ಧಾರ ಮಾಡುತ್ತಾನೆ. ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ ಯೆಹೋವನು ಅವೆಲ್ಲವುಗಳಿಂದ ಅವನನ್ನು ಬಿಡಿಸುತ್ತಾನೆÀ. -ಕೀರ್ತನೆ 34:18,19

ಶಿಷ್ಟನು ಏಳು ಸಾರಿ ಬಿದ್ದರೂ, ಮತ್ತೆ ಏಳುವನು. -ಜ್ಞಾನೋಕ್ತಿ 24:16

ನಾವು ಯಾವಾಗಲಾದರು ಕೈಮೀರಿದ ತಪ್ಪುದಾರಿಯಲ್ಲಿ ನಡೆಯುತ್ತಿರುವುದು ನಮಗೆ ಗೋಚರವಾದಾಗ ಕರ್ತನು ಮೊದಲೆ ಹೇಳಿರುವಂತೆ ನಮಗೆ ಹತಾಶೆಯಾಗುವುದು. ಈ ಸ್ಥಿತಿಯನ್ನು ಕರ್ತನು ಒಂದುಗೂಡಿಸಿದರ ಪರಿಣಾಮವಾಗಿ ನಮ್ಮ ಹೃದಯವು ಜಜ್ಜಲ್ಪಟ್ಟು ದೀನತೆಯ ಗುಣದ ಆಶೀರ್ವಾದ ನಮಗೆ ದೊರಕುವುದು. ಆಗ ನಾವು ಎಚ್ಚರಿಕೆಯಿಂದಿದ್ದು ನಂಬಿಕೆಯಿಂದ ಕೂಡಿದವರಾಗಿ ಹೆಚ್ಚಿನ ಉತ್ಸಾಹವನ್ನು ಭವಿಷ್ಯದಲ್ಲಿ ತೋರಿಸಲು ಸಹಾಯಕವಾಗುವುದು. ಹೀಗಿರುವಲ್ಲಿ ನಮ್ಮ ಜೀವನದಲ್ಲಿ ಕೆಲವು ಸಲ ನಾವು ಎಡವಿದರು ಅದು ಮುಂದೆ ಶ್ರೇಷ್ಠವಾದ ಗುಣವನ್ನು ಹೊಂದಲು ಪ್ರಗತಿಯ ಮೆಟ್ಟಿಲಾಗುವುದು.-Z ’03, 217 (ಖ 3222).

* * *

ಜುಲೈ - 23

ಯಾವನಾದರು ಸ್ವಂತ ಜನರನ್ನು ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ, ಅವನು ಕ್ರಿಸ್ತ ನಂಬಿಕೆಯನ್ನು ತಿರಸ್ಕರಿಸಿದವನೂ, ನಂಬದವನಿಗಿಂತ ಕಡೆಯಾದವನೂ ಆಗಿದ್ದಾನೆ. - 1ತಿಮೋಥಿ 5:8

“ನಂಬಿಕೆ” ಯೆಂಬುದು, ಪ್ರೀತಿಯ ಯೋಚನೆಗಳು, ಅನುಕಂಪ, ಇತರರ ಬಗ್ಗೆ ಕಾಳಜಿ ವಹಿಸುವದರಲ್ಲಿ ಸೇರಿದೆ, ಅದರಲ್ಲೂ ವಿಶೇಷವಾಗಿ ಮನೆವಾರ್ತೆಯವರ ವಿಷಯದಲ್ಲಿ. ನಮ್ಮ ಕರ್ತನು ವ್ಯಕ್ತಪಡಿಸಿದ ಅನುಕಂಪವನ್ನು ಗಮನಿಸಿದರೆ ಆತನು ಇತರರ ಬಗ್ಗೆ ತೋರಿಸಿದ ಕಾಳಜಿ, ಆತನು ಅತಿಸಂಕಟದಲ್ಲೂ ಮತ್ತು ಭಯಂಕರ ವೇದನೆ ಅನುಭವಿಸುತ್ತಿದ್ದಾಗಲೂ ತಮ್ಮ ತಾಯಿ ಬಗ್ಗೆ ಯೋಚನೆ ಆಕೆಯನ್ನು ನೋಡಿಕೊಳ್ಳಲು ಮಾಡಿದ ಏರ್ಪಾಡು ಇಲ್ಲಿ ತನ್ನ ಆಪ್ತ ಶಿಷ್ಯನಾದ ಯೋಹಾನನ್ನು ಕರ್ತನು ಈ ಕಾರ್ಯಕ್ಕೆ ಆರಿಸಿಕೊಳ್ಳಲು 3 ಮುಖ್ಯ ಕಾರಣಗಳಿವೆ. ಮೊದಲನೆಯದಾಗಿ ಪ್ರೀತಿಯಿಂದ ಕೂಡಿದ ಮೃದು ಸ್ವಭಾವ, ಎರಡನೆದಾಗಿ, ಕರ್ತನ ಬಗ್ಗೆ ಮತ್ತು ಸತ್ಯದ ಬಗ್ಗೆ ಆತನ ಉತ್ಸಾಹ. ಮೂರನೆಯದಾಗಿ, ಕರ್ತನ ಕೊನೆಗಳಿಗೆಯಲ್ಲಿ ಪ್ರಾಣಪಾಯವನ್ನು ಲೆಕ್ಕಿಸದೆ ಕರ್ತನ ಸಮೀಪವಿದ್ದದ್ದು. ಕರ್ತನು ಒಪ್ಪುವ ಈ ಗುಣಗಳನ್ನೂ ನಾವು ಲಕ್ಷ್ಯವಿಟ್ಟು ಈ ಗುಣಗಳನ್ನು ಅಭ್ಯಾಸ ಮಾಡಿ ಕರ್ತನು ದಯಪಾಲಿಸುವ ವಿಶೇಷ

ಅವಕಾಶಗಳನ್ನು ಉಪಯೋಗಿಸಿಕೊಂಡು ಕರ್ತನ ಸೇವೆಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳೋಣ-Z ’99, 127 (ಖ 2473).

* * *

ಜುಲೈ - 24

ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ.

-ಯಾಕೋಬ 5:16

ಪ್ರಾರ್ಥನೆಯ ಮೂಲಕ ಕರ್ತನೊಂದಿಗೆ ಸಂಬಂಧ ಇಟ್ಟುಕೊಳ್ಳುವದಾದರೆ ನಮ್ಮ ದಿನ ನಿತ್ಯದ ವಹಿವಾಟಿನಲ್ಲಿ ಕರ್ತನ ಮೇಲ್ವಿಚಾರಣೆಯ ಬಗ್ಗೆ ನಮ್ಮ ವಿಶ್ವಾಸ ಹೆಚ್ಚುವುದು. ಮತ್ತು ಕರ್ತನು ಮಾಡಿರುವ ಮಹಾ ಅಮೂಲ್ಯ ವಾಗ್ದಾನಗಳ ಬಗ್ಗೆ ನಮ್ಮ ನಂಬಿಕೆ ಹೆಚ್ಚುವುದು. ಕರ್ತನು ನಮ್ಮನ್ನು ಭೂತಕಾಲದಲ್ಲೂ, ವರ್ತಮಾನ ಕಾಲದಲ್ಲೂ ನಡೆಸುತ್ತಿದ್ದಾನೆ ಎಂಬುವ ಅರಿವು ಅತಿ ಹೆಚ್ಚಾಗಿ ನಮಗೆ ಮನದಟ್ಟಾಗುವುದು. ಜೊತೆಗೆ ನಮ್ಮ ಎಲ್ಲಾ ಕ್ರಿಸ್ತೀಯ ಸಹೋದರರ ಬಗ್ಗೆ ಪ್ರೀತಿಯು ಹೆಚ್ಚಾಗುವುದು ಮತ್ತು ಅವರು ಆತ್ಮೀಕವಾಗಿ ಅಭಿವೃದ್ಧಿಯಾಗಲು ನಮ್ಮ ಕಾಳಜಿ, ಹಂಬಲ ಹೆಚ್ಚಾಗುವುದು. ಪ್ರಾರ್ಥನೆಯು ಆತ್ಮೀಯ ವಿಷಯಗಳಲ್ಲಿ ಅಭಿವೃದ್ಧಿಯಾಗುವುದಕ್ಕೆ ಬಹಳ ಹತ್ತಿರವಿದ್ದು ಕಾರ್ಯನಿರತವಾಗಿರುವುದನ್ನು ಗುರುತಿಸಿ ದೇವರ, ಸಹೋದರರ ಮತ್ತು ಮಾನವರ ಪರವಾಗಿ ಆತ್ಮೀಯ ಫಲಗಳನ್ನು ವೃದ್ಧಿಪಡಿಸುವುದು.-Z ’00, 268 (ಖ-2692).

* * *

ಜುಲೈ - 25

ನ್ಯಾಯವನ್ನು ವಿಧಿಸಿದ ನ್ಯಾಯಾಧಿಪತಿ ಒಬ್ಬನೇ, ಆತನೇ ಉಳಿಸುವದಕ್ಕೂ, ನಾಶ ಮಾಡುವುದಕ್ಕೂ ಶಕ್ತನು ಹೀಗಿರುವಾಗ ನಿನ್ನ ನೆರೆಯವನ ವಿಷಯದಲ್ಲಿ ತೀರ್ಪುಮಾಡುವದಕ್ಕೆ ನೀನು ಯಾರು? -ಯಾಕೋಬ 4:12

ಅಪೋಸ್ತಲ ಪೌಲನು ಈ ವಾಕ್ಯದ ಅರ್ಥಕ್ಕೆ ಹೊಂದಾಣಿಕೆಯಾಗಿ ಮತ್ತೊಂದು ಸಂದರ್ಭದಲ್ಲಿ ಹೇಳುವದೇನಂದರೆ, ಸಹೋದರರಾಗಲಿ, ಲೋಕವಾಗಲಿ ನನ್ನ ಬಗ್ಗೆ ತೀರ್ಪುಮಾಡಲು ಅರ್ಹತೆಯಿಲ್ಲ. ನಮ್ಮ ಆಂತರ್ಯವನ್ನು, ಹೃದಯವನ್ನು, ಎಲ್ಲಾ ತರದ ಸ್ಥಿತಿಗಳನ್ನು, ಪರೀಕ್ಷೆಗಳನ್ನು ಮತ್ತು ಬಲಹೀನತೆಯನ್ನು ತಿಳಿದಿರುವ ಕರ್ತನು ನಮಗೆ ತೀರ್ಪುಕೊಡಲು ಸಮರ್ಥನಾಗಿದ್ದಾನೆ. ಮತ್ತೆ ಪೌಲನು ಹೇಳುವದೇನಂದರೆ "ನನ್ನನ್ನೂ ನಾನು ವಿಚಾರಿಸಿಕೊಳ್ಳುವುದಿಲ್ಲ." (1ಕೊರಿಂಥ 4:3) ದೇವರ ಮಕ್ಕಳಾಗಿ ಮನಸಾಕ್ಷಿಯಂತೆ ನಡೆಯುತ್ತಿರುವವರನ್ನು ನಾವು ದಂಡಿಸದೆ, ಅದೇ ರೀತಿಯಲ್ಲಿ ನಮ್ಮನ್ನು ನಾವು ದಂಡಿಸಿಕೊಳ್ಳದೆ ಇರುವುದು ಒಂದು ಒಳ್ಳೆಯ ತೀರ್ಮಾನವಾಗಿದೆ. ನಾವು ಪ್ರತಿನಿತ್ಯವು ಪರಲೋಕದ ಗುಣಗಳನ್ನು ಅಭ್ಯಾಸ ಮಾಡುತ್ತಾ ಕರ್ತನ ಸೇವೆಯಲ್ಲಿ ನಿರತರಾಗಿದ್ದು ಅದರ ಪರಿಣಾಮವನ್ನು ಕರ್ತನಿಗೆ ಬಿಡೋಣ.-Z '99, 139 (ಖ 2479).

* * *

ಜುಲೈ - 26

ಯಾವನು ಜಯಹೊಂದುತ್ತಾನೋ ಅವನಿಗೆ . . . . . . ಬಿಳೀ ಕಲ್ಲನ್ನೂ, ಆ ಕಲ್ಲಿನ ಮೇಲೆ ಕೆತ್ತಿದ ಹೊಸ ಹೆಸರನ್ನೂ ಕೊಡುವೆನು; ಆ ಹೆಸರನ್ನು ಹೊಂದಿದವನಿಗೇ ಹೊರತು ಅದು ಇನ್ನಾರಿಗೂ ತಿಳಿಯದು." -ಪ್ರಕಟನೆ 2:17

ಜಯಶಾಲಿಗಳಾಗುವವರು ಎಲ್ಲವನ್ನು ಕರ್ತನಿಗಾಗಿ ತ್ಯಾಗ ಮಾಡಿ ಕರ್ತನ ಸಂಪರ್ಕ ಮತ್ತು ಆತನ ಮೆಚ್ಚುಗೆಗೆ ಪಾತ್ರರಾಗಿರುವದನ್ನು ದೃಢಪಡಿಸಬೇಕು, ಮತ್ತು ಬೇರೆ ಎಲ್ಲವನ್ನು ತ್ಯಾಗಮಾಡಿ ಕರ್ತನ ಪ್ರೀತಿ ಆತನ ಅನ್ಯೋನ್ಯತೆಯನ್ನು ಕಾಪಾಡಿಕೊಳ್ಳಬೇಕು. ಈ ಪರೀಕ್ಷೆ ಪ್ರತಿನಿತ್ಯ ಕರ್ತನಿಗಾಗಿ ಪ್ರತಿಷ್ಠಿಸಿಕೊಂಡವರ ಹತ್ತಿರ ಬರುವುದು. ಪ್ರತಿಯೊಬ್ಬ ನಂಬಿಗಸ್ತನು ಪರೀಕ್ಷೆಗಳಲ್ಲಿ ಇದೂ ಒಂದು ಎಂಬುದನ್ನು ತಿಳಿದು ತನ್ನ ಆಕಾಂಕ್ಷೆಯನ್ನು ಆತ್ಮೀಯ ಪರಲೋಕದ ವಸ್ತುಗಳ ಮೇಲಿಟ್ಟು, ಲೌಕಿಕ ಆಶೆಗಳು, ಜೀವಿಗಳು ಮತ್ತು ವಸ್ತುಗಳ ಮೇಲಿಟ್ಟಿರುವ ಆಕಾಂಕ್ಷೆಯನ್ನು ಸಾಯಿಸಿ ಕರ್ತನ ಮೇಲಿಟ್ಟಿರುವ ಪ್ರೀತಿ ವಿಶ್ವಾಸ ಮತ್ತು ಸೇವೆಯ ಸ್ಪರ್ಧೆಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು.-Z '99, 140 (ಖ 2479).

* * *

ಜುಲೈ - 27

ಈ ದಾನಿಯೇಲನ ಮೇಲೆ ತಪ್ಪು ಹೊರಿಸಲು ಇವನ ದೇವಧರ್ಮದ ಮೂಲಕವೇ ಹೊರತು ಇನ್ನಾವದರಲ್ಲಿಯೂ ನಮಗೆ ಅವಕಾಶ ದೊರೆಯದು ಅಂದುಕೊಂಡರು.

-ದಾನಿಯೇಲ 6:5

ಎಲ್ಲರೂ ದಾರಿ ತೋರಿಸುವ ಆತ್ಮಗಳಲ್ಲ, ದಾನಿಯೇಲನಂತೆ, ದಾನಿಯೇಲನಿಗೆ ಕೊಟ್ಟಂತ ದರ್ಶನಗಳು, ಪ್ರಕಟನೆಗಳು, ವಿಷಯಗಳನ್ನು ವಿಮರ್ಶಿಸುವ ಮತ್ತು ಅವುಗಳ ಅರ್ಥಗಳನ್ನು ಹೇಳುವಂತ ವರ ಎಲ್ಲರಿಗೂ ಕೊಟ್ಟಿಲ್ಲ. ಆದರೆ ಎಲ್ಲರಲ್ಲೂ ನೀತಿ ತತ್ವಗಳ ಬಗ್ಗೆ ಗಂಭೀರವಾದ ಶ್ರದ್ಧೆ ಭಕ್ತಿ ಇದೆ. ಈ ಶ್ರದ್ಧೆ ಮತ್ತು ಭಕ್ತಿ ದೈವ ನಿಯಮದನ್ವಯ, ನಮ್ಮ ದಾನಿಯೇಲ ನಮ್ಮ ನಾಯಕ ಕರ್ತನಾದ ಕ್ರಿಸ್ತುವಿನ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವಾಗ ಪ್ರತಿ ಹೆಜ್ಜೆಯಲ್ಲೂ ಪರೀಕ್ಷೆಗೊಳಗಾಗುವರು. ಹೀಗಿರುವಲ್ಲಿ ಕ್ರಿಸ್ತನ ನಾಮವನ್ನು ಹೇಳಿಕೊಳ್ಳುವ ಪ್ರತಿಯೊಬ್ಬನೂ ಅಧರ್ಮವನ್ನು ಬಿಟ್ಟು ಧೈರ್ಯವಂತನಾದ ದಾನಿಯೇಲನಂತೆ ನಂಬಿಗಸ್ತರಾಗಿರಬೇಕು.-Z '99, 167 (ಖ 2492).

* * *

ಜುಲೈ - 28

"ಒಂದು ವೇಳೆ ನೀತಿಯ ನಿಮಿತ್ತವೇ ಬಾಧೆಪಟ್ಟರೆ ನೀವು ಧನ್ಯರೇ." -1ಪೇತ್ರ 3:14

ನಾವು ಸತ್ಯದ ಅಭಿಮಾನಿಗಳಾಗಿರುವುದರ ಪ್ರಯುಕ್ತ ದ್ವೇಷಿಸಲ್ಪಟ್ಟರೆ (ಪ್ರತ್ಯಕ್ಷವಾಗಿಯೋ ಅಥವ ಪರೋಕ್ಷವಾಗಿಯೋ) ನಾವು ನೀತಿಯ ನಿಮಿತ್ತ ಬಾಧೆಗೆ ಒಳಗಾಗಿದ್ದೇವೆ ಎಂಬದರಲ್ಲಿ ತೃಪ್ತಿ ಪಡಬೇಕು. ಅಪೋಸ್ತಲನು ಹೇಳುವಂತೆ ಕೆಲವರು ಕೆಟ್ಟನಡತೆಯುಳ್ಳವರಾಗಿ ಬೇರೆಯವರ ವಿಷಯದಲ್ಲಿ ತಲೆಹಾಕಿ ಅಥವ ಅಸ್ವಾಭಾವಿಕವಾಗಿ ವರ್ತಿಸಿ ಅಸಭ್ಯವಾಗಿ ನಡೆದು, ಜ್ಞಾನದ ಕೊರತೆಯುಳ್ಳವರಾಗಿ ದೇವರ ವಾಕ್ಯದಲ್ಲಿ ನಮಗೆ ಕೊಟ್ಟಿರುವ ಎಚ್ಚರಿಕೆಯಂತೆ ಸಮರ್ಥನೀಯವಾಗಿ ನಡೆಯದೆ ಬಾಧೆಪಡುವರು.

ನಾವು ದೇವರ ಚಿತ್ತವನ್ನು ಅಧ್ಯಾಯನ ಮಾಡುವುದೊಂದೆ ಅಲ್ಲದೇ ನಮ್ಮನ್ನು ಆವರಿಸಿಕೊಂಡಿರುವ ಸಂದರ್ಭಗಳು ಮತ್ತು ಸ್ಥಿತಿಗಳನ್ನು ಕೂಡ ಗಮನಿಸಿ ಸಮಯೋಚಿತವಾದ ಸಮಂಜಸವಾದ ಮಾರ್ಗವನ್ನು ಅನುಸರಿಸಿ ನಡೆಯುವುದು ನಮ್ಮ ಕರ್ತವ್ಯವಾಗಿದೆ. ಎರಡನೆಯದಾಗಿ ಆದಷ್ಟು ಮಟ್ಟಿಗೆ ನಮಗೆ ತೊಂದರೆಯಾಗದಂತೆ ಕಷ್ಟದಲ್ಲಿ ಸಿಲುಕದಂತೆ, ಇತರರಿಗೆ ಆದಷ್ಟು ಮಟ್ಟಿಗೆ ಅಸಂತೋಷವಾಗದಂತೆ, ದೇವರ ನಡೆಸುವಿಕೆ, ಆತನ ಜ್ಞಾನ, ಅನುಗ್ರಹದಿಂದ ಕೂಡಿದವರಾಗಿ ನಮ್ಮ ಜೀವನವನ್ನು ಸಾಗಿಸಬೇಕು.-Z '99, 166, 167 (ಖ 2492).

* * *

ಜುಲೈ - 29

ಅರಸೇ, ನಾವು ಸೇವಿಸುವ ದೇವರಿಗೆ ಚಿತ್ತವಿದ್ದರೆ. . . . ಹೇಗೂ ನಿನ್ನ ಕೈಯಿಂದ ನಮ್ಮನ್ನು ಬಿಡಿಸುವನು. -ದಾನಿಯೇಲ 3:17

ಕರ್ತನ ಅನುಗ್ರಹ ವಿಭಿನ್ನವಾಗಿರುವುದು, ಆತನ ಜನರು ತಮಗೆ ವಿಮೋಚನೆ ಯಾವಾಗ ಬರುತ್ತದೆ ಎಂಬುದರ ಬಗ್ಗೆ ತೀರ್ಮಾನಿಸಬಾರದು. ಅದರಲ್ಲೂ ಅವರು ಸಂಪೂರ್ಣವಾಗಿ ವೈರಿಗಳ ವಶಕ್ಕೆ ಒಪ್ಪಿಸಲ್ಪಟ್ಟು ದೈವಾನುಗ್ರಹ ಅವರಿಗೆ ಪ್ರಕಟವಾಗದೆ ಇದ್ದರೂ ದೇವರ ಚಿತ್ತಕ್ಕೆ ಒಪ್ಪಿಸಿಕೊಳ್ಳಬೇಕು. ಕೆಲವು ಸಂದರ್ಭಗಳಲ್ಲಿ ಕರ್ತನ ಜನರು ಸತ್ಯವನ್ನು ಪ್ರಚಾರಮಾಡದಂತೆ ಕಟ್ಟಿಹಾಕಲ್ಪಟ್ಟಿದ್ದರೂ ಆ ಮೂರು ಮಂದಿ ಇಬ್ರಿಯರ ಕಟ್ಟುಗಳನ್ನು ಬೆಂಕಿಯು ಸುಟ್ಟುಹಾಕಿ ಅವರನ್ನು ಬಿಡುಗಡೆ ಮಾಡಿದಂತೆ, ದೇವ ಜನರಿಗೆ ದೇವರ ಮಹಿಮೆಯನ್ನು ಕೊಂಡಾಡಲಿಕ್ಕೆ ಹೆಚ್ಚಿನ ಅವಕಾಶಗಳು ಸಂದರ್ಭಗಳು ಒದಗಿ ಬಂದು ಅವರು ಯಾವ ಅಡಚಣೆಯಿಲ್ಲದೆ ಸತ್ಯವನ್ನು ಪ್ರಚಾರ ಮಾಡಲು ಬೇರೆ ಮಾರ್ಗಕ್ಕಿಂತ ದೇವರು ತೋರಿಸಿದ ಮಾರ್ಗವು ಫಲಪ್ರದಾಯಕವಾಗಿರುವುದು. ಹೀಗಿರುವಲ್ಲಿ ನಾವು ಯಾವುದನ್ನೂ ಮೊದಲೇ ತೀರ್ಮಾನಿಸದೆ ಎಲ್ಲವನ್ನೂ ದೈವ ಚಿತ್ತ ಮತ್ತು ದೈವಾನುಗ್ರಹಕ್ಕೆ ಬಿಟ್ಟು ಏನೇ ಸಂದರ್ಭಗಳು ಬಂದರೂ ಕರ್ತನಲ್ಲಿ ನಂಬಿಕೆಯಿಟ್ಟು ನಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಬೇಕು.-Z '99, 171 (ಖ 2494).

* * *

ಜುಲೈ - 30

ತೋಟಗಳನ್ನು ಹಾಳುಮಾಡುವ ನರಿಗಳನ್ನು, ನರಿಮರಿಗಳನ್ನೂ ಹಿಡಿಯಿರಿ.

-ಪರಮಗೀತ 2:15

ಅನೇಕರು ತಾವು ಮಾಡಿರುವ ಪ್ರತಿಷ್ಠೆಯ ಹರಕೆಯನ್ನು ಉದಾಸೀನಪಡಿಸಿ, ಸಣ್ಣ ಪುಟ್ಟ ತಪ್ಪುಗಳನ್ನು ಬಹಳ ಹಗುರವಾಗಿ ಪರಿಗಣಿಸಿ ತಮ್ಮಲ್ಲೆ ಅಂದುಕೊಳ್ಳುವದೇನಂದರೆ ನಾವು ಯಾವ ಪ್ರಯೋಜನಕ್ಕಾಗಿ ಲೌಕಿಕ ಜೀವನವನ್ನು ನಮ್ಮ ಜೀವನದಿಂದ ಬೇರೆಯಾಗಿ ತಿಳಿಯುವುದು? ಇಲ್ಲ! ಇದರಲ್ಲಿ ಬಹಳ ಪ್ರಯೋಜನವಿದೆ. ಚಿಕ್ಕ ಚಿಕ್ಕ ವಿಷಯಗಳಲ್ಲಿ ನಾವು ಸಾಧಿಸುವ ಜಯ ದೊಡ್ಡ ದೊಡ್ಡ ಕಾರ್ಯಗಳನ್ನು ಸಾಧಿಸಲು ಸಾಧ್ಯವಾಗುವುದು. ಬದಲು ನಾವು ಚಿಕ್ಕ ಚಿಕ್ಕ ಶಾರೀರಿಕ ಇಚ್ಛೆಗಳನ್ನು ಪೂರೈಸುವದಾದರೆ ನಮ್ಮ ಹೋರಾಟದಲ್ಲಿ ಸಂಪೂರ್ಣವಾಗಿ ಸೋಲುತ್ತೇವೆ. ಕ್ರಿಸ್ತೇಸುವಿನ ಹೆಜ್ಜೆಯ ಜಾಡಿನಲ್ಲಿ ನಡೆಯುವ ನಮಗೆ ಪರೀಕ್ಷೆಗಳು (ನಮ್ಮ ಪರೀಕ್ಷೆ ಈಗಾಗಲೆ ಪ್ರಾರಂಭವಾಗದೆ ಇದ್ದ ಪಕ್ಷದಲ್ಲೂ) ಬರುವುದುಂಟು, ನಾವು ನಮ್ಮ ಜೀವನದ ಚಿಕ್ಕ ಚಿಕ್ಕ ವಿಷಯಗಳನ್ನು ನಾವು ತ್ಯಾಗಮಾಡಿ ನಮ್ಮ ಸ್ವಾಭಾವಿಕ ಶಾರೀರಿಕ ಬೇಡಿಕೆಗಳಾದ ಆಹಾರ, ಬಟ್ಟೆ, ನಿರ್ವಹಣೆ ಇವುಗಳನ್ನು ನಾವು ಧಮನಗೊಳಿಸಿದಾಗ ಮಾತ್ರ ನಾವು ಆತ್ಮೀಯವಾಗಿ ಬಲಹೊಂದಿ ಜಯಶಾಲಿಗಳಾಗುವೆವು.-Z '99, 172 (ಖ 2494).

* * *

ಜುಲೈ - 31

ಅವನವನ ಕೆಲಸವು ವ್ಯಕ್ತವಾಗುವುದು. ಕ್ರಿಸ್ತನು ಬರುವ ದಿನವು ಬೆಂಕಿಯೊಡನೆ ಉದಯವಾಗಿ ಅವನವನ ಕೆಲಸವೆಂಥದೋ ಆ ಬೆಂಕಿ ಶೋಧಿಸುವದು. -1ಕೊರಿಂಥ 3:13

ಕ್ರಿಸ್ತನು ಬರುವ ಈ ಕಾಲವನ್ನು ಕುರಿತು ಅಪೋಸ್ತಲನು ಹೇಳುವದೇನಂದರೆ ಇದು ಬೆಂಕಿಯಿಂದ ಶೋಧಿಸಲ್ಪಟ್ಟು ಪರೀಕ್ಷಿಸುವ ಕಾಲ ಎಂಬದಾಗಿ ಹೇಳಿದ್ದಾನೆ. ಇದನ್ನು ಒಬ್ಬ ಉತ್ಸಾಹಭರಿತ ನಂಬಿಕೆಯಿಂದ ಕೂಡಿರುವ ಕ್ರೈಸ್ತನು ಮನೆಯನ್ನು ಚಿನ್ನ ಬೆಳ್ಳಿ ಮುತ್ತು ರತ್ನಗಳಿಂದ ಕಟ್ಟುವನು ಮತ್ತು ಯುಗಾಂತ್ಯದಲ್ಲಿ ಸಂಭವಿಸುವ ಪರೀಕ್ಷೆಯ ಬೆಂಕಿಯಿಂದ ಕೂಡಿರುವ ಪರೀಕ್ಷೆ ಈ ಬೆಂಕಿಯು ನಿಜವಾದ

ಗುಣವನ್ನು ಹೊಂದಿರುವವನನ್ನು ಬಿಟ್ಟು ಬೇರೆ ಎಲ್ಲವನ್ನು ದಹಿಸಿ ಬಿಡುವುದು ಎಂಬದಾಗಿ ಹೇಳಿದ್ದಾನೆ. ಈ ಪ್ರಾಮಾಣಿಕ ನೈಜ ಗುಣ ಒಂದು ಕ್ಷಣದಲ್ಲಾಗಲಿ, ಒಂದು ದಿನದಲ್ಲಾಗಲಿ ಅಥವ ಆಕಸ್ಮಿಕವಾಗಿ ಬೆಳೆಯುವಂಥದಲ್ಲ ಇದು ನಿಧಾನವಾಗಿ, ದಿನೇ ದಿನೇ ಅಭಿವೃದ್ದಿಯಾಗುತ್ತಾ ಚೆನ್ನಾಗಿ ಒರೆಹಚ್ಚಲ್ಪಟ್ಟು ಬಲಗೊಂಡು ಆಲೀವ್ ಮರದಂತೆ ದೃಢವಾಗಿ ನಿಲ್ಲುವಂತ ನೈಜ ಗುಣವಾಗಿರುವುದು.-Z ’99, 171 (ಖ 2494).

* * *